ಅಧ್ಯಕ್ಷರು :— ಸಮಗ್ರವಾದ ವರದಿಯನ್ನು ಇಲ್ಲಿ ಇಟ್ಟು ಮಾಡುತ್ತೇವೆ ಎಂದು ಅವರು ಹೇಳಿದ ಮೇಲೆ ಇನ್ನೇನಿದೆ? ಮುಂದೆ ಈ ಬಗ್ಗೆ ಪ್ರಶ್ನೆಗಳನ್ನು ಕೇಳಲು ಅವಕಾಶವಿಲ್ಲ. ಈಗ ಮುಂದಿನ ಪ್ರಶ್ನೆ.

ಪೌರಾಡಳಿತ ನಿರ್ದೇಶನಾಲಯದ ಕಾರ್ಯವ್ಯಾಪ್ತಿ.

550(5217) ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಪೌರಾಡಳಿತ ನಿರ್ದೇಶನಾಲಯವು ಎಂದಿನಿಂದ ಪ್ರಾರಂಭಿಸಲಾಯಿತು. ಇದರ ಕಾರ್ಯವ್ಯಾಪ್ತಿಯ ವಿವರಗಳನ್ನು ನೀಡುವುದು?

ಆ) ಪೌರಾಡಳಿತ ಇಲಾಖೆಗೆ ವಿವಿಧ ಮೂಲಗಳಿಂದ ಬರುವ ಆದಾಯವೆಷ್ಟು?

ಇ) ಈ ಇಲಾಖೆಯನ್ನು ರದ್ದುಗೊಳಿಸಿ ಈ ಹಿಂದೆ ಇದ್ದಂತೆ ಆಯಾ ವಿಭಾಗಾಧಿಕಾರಿಗಳಿಗೆ ಇದರ ಕಾರ್ಯಭಾರವನ್ನು ವಹಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಈ) ಹಾಗಿದ್ದಲ್ಲಿ ಕಾರಣಗಳೇನು? ಈ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) ಪೌರಾಡಳಿತ ರಾಜ್ಯ ಸಚಿವರ ಪರವಾಗಿ :—

ಅ) ಪೌರಾಡಳಿತ ನಿರ್ದೇಶನಾಲಯವು 1984 ರಲ್ಲಿ ಅಸ್ತಿತ್ವಕ್ಕೆ ಬಂದಿರುತ್ತದೆ. ರಾಜ್ಯದಲ್ಲಿರುವ 211 ನಗರ ಸ್ಥಳೀಯ ಸಂಸ್ಥೆಗಳ ಆಡಳಿತ ಮೇಲ್ವಿಚಾರಣೆ, ವಿವಿಧ ಕೇಂದ್ರ ಪುರಸ್ಕೃತ ಹಾಗೂ ರಾಜ್ಯ ಪುರಸ್ಕೃತ ಯೋಜನೆಗಳ ಸ್ಥಳೀಯ ನಗರ ಸಂಸ್ಥೆಗಳಿಂದ ಅನುಷ್ಠಾನಗೊಳಿಸುವಿಕೆ ಮತ್ತು ಮೇಲುಸ್ತುವಾರಿ.

ಆ) ಪೌರಾಡಳಿತ ಇಲಾಖೆಗೆ ಯಾವುದೇ ನಿರ್ದಿಷ್ಟವಾದ ಆದಾಯದ ಮೂಲಗಳಿರುವುದಿಲ್ಲ. ಇದೊಂದು ಸಾರ್ವಜನಿಕ ಸೇವೆಯನ್ನು ಗುರಿಯಾಗಿರಿಸಿಕೊಂಡಿರುವ ಸರ್ಕಾರಿ ಇಲಾಖೆಯಾಗಿದ್ದು, ರಾಜ್ಯದ ಆಯವ್ಯಯದಲ್ಲಿ ನಿಗಧಿಗೊಳಿಸಲಾಗಿರುವ ಆಯವ್ಯಯದ ಅನುಸಾರ ಕಾರ್ಯ ನಿರ್ವಹಿಸುತ್ತಿದೆ.

ಇ) ಪೌರಾಡಳಿತ ನಿರ್ದೇಶನಾಲಯವನ್ನು ರದ್ದುಗೊಳಿಸುವ ಪ್ರಸ್ತಾವನೆ ಈಗ ಸರ್ಕಾರದ ಮುಂದೆ ಇರುವುದಿಲ್ಲ. ಪೌರಾಡಳಿತ ನಿರ್ದೇಶನಾಲಯಕ್ಕೆ ಮಂಜೂರಾದ ಹುದ್ದೆಗಳನ್ನು ಕಾಲಕಾಲಕ್ಕೆ ಮುಂದುವರೆಸುತ್ತಾ ಬದಲಾಗುತ್ತಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಎ. ನಾರಾಯಣಸ್ವಾಮಿ :— ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಸನ್ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ರವರ ಕೆಲಸ ಮೇಲ್ವಿಚಾರಣೆ ನಡೆಸುವುದು ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದಮಟ್ಟಿಗೆ ಡಿ.ಎಂ.ಎ.ಗಳು ಮಾಡುತ್ತಿರುವುದು ಏನೆಂದರೆ, ಬಿಲ್ ಕಲೆಕ್ಟರ್‌ಗಳನ್ನು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಆಗಿ ಪ್ರಮೋಷನ್ ಮಾಡುವುದು, ಟ್ರಾನ್ಸ್‌ಫರ್ ಮಾಡುವುದು, ಸರ್ಕಾರದ ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಲೂಟಿ ಮಾಡಿದವರ ಮೇಲೆ ಚಾರ್ಜಸ್ ಇದ್ದರೆ, ಆ ಚಾರ್ಜಸ್‌ಗಳನ್ನು ಕ್ಲೋಸ್ ಮಾಡುವುದು. ಇದು ಡಿ.ಎಂ.ಎ. ಮಾಡುತ್ತಿರುವ ಕೆಲಸ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇತ್ತೀಚೆಗೆ ನನ್ನ ಕ್ಷೇತ್ರದಲ್ಲಿ ಒಂದು ಸಮಸ್ಯೆಯಾಯಿತು.

ಅಧ್ಯಕ್ಷರು :— ಮಾನ್ಯ ನಾರಾಯಣಸ್ವಾಮಿಯವರೇ, ನೀವು ಕೇಳಬೇಕಾಗಿರುವುದು ಉಪ ಪ್ರಶ್ನೆ. ವಿವರಗಳು ಬೇಕಾಗಿಲ್ಲ, ವಿವರಗಳಿಗೆ ಹೋಗಬೇಡಿ. ಈ ರೀತಿಯಾಗಿದೆ ಎಂದು ಹೇಳಿ.

ಶ್ರೀ ಎ. ನಾರಾಯಣಸ್ವಾಮಿ :— ಡಿ.ಎಂ.ಎ. ಅವರ ಕಾರ್ಯವ್ಯಾಪ್ತಿ ಏನು ಎನ್ನುವುದಾದರೂ ಹೇಳಬೇಡವೆ? ಡಿ.ಎಂ.ಎ. ಏನೂ ಕೆಲಸ ಮಾಡುತ್ತಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಅದನ್ನು ರದ್ದುಮಾಡಬೇಕೋ, ಬಿಡಬೇಕೋ, ಅದನ್ನು ಇಡುವುದು ಸ್ತುತ್ಯಾರ್ಹವೇ ಎನ್ನುವುದು ಅವರ ಪ್ರಶ್ನೆಯಾಗಿದೆ. ಅದನ್ನು ಬಿಟ್ಟು ಅವರು ತಮ್ಮ ಕ್ಷೇತ್ರವಾದ ಆನೇಕಲ್ ಬಗ್ಗೆ ಪ್ರಶ್ನೆ ರೈಸ್ ಮಾಡಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಪಾಲಿಸಿ ಮ್ಯಾಟರ್ ವಿಷಯ ಕೇಳಿ. ಇದನ್ನು ಏಕೆ ರದ್ದು ಮಾಡಬೇಕು ಅಥವಾ ಇದು ಏಕೆ ಇರಬೇಕು ಎನ್ನುವುದನ್ನು ನಾನು ಎಕ್ಸ್‌ಪ್ಲೈನ್ ಮಾಡುತ್ತೇನೆ. ತಾವು ತಮ್ಮ ಸಿ.ಎಂ.ಸಿ. ಬಗ್ಗೆ ಹೇಳುವುದಾದರೆ ಅದು ಸರಿಹೋಗುವುದಿಲ್ಲ.

ಅಧ್ಯಕ್ಷರು :— ಡೈರೆಕ್ಟರ್ ಹುದ್ದೆಬೇಕೋ, ಬೇಡವೋ ಎನ್ನುವುದಷ್ಟನ್ನು ಮಾತ್ರ ಕೇಳಿ.

ಶ್ರೀ ಎ. ನಾರಾಯಣಸ್ವಾಮಿ :— ಪೌರಾಡಳಿತ ನಿರ್ದೇಶನಾಲಯದ ಕಾರ್ಯವ್ಯಾಪ್ತಿ ಏನು, ಅಧಿಕಾರವ್ಯಾಪ್ತಿ ಏನು, ಎನ್ನುವುದಕ್ಕೆ ಉದಾಹರಣೆ ಕೊಡುತ್ತಿದ್ದೇನೆ. ಒಂದು ವಿಚಾರದ ಬಗ್ಗೆ ನಾನು ನಿರ್ದೇಶಕರ ಹತ್ತಿರ ಹೋಗಿದ್ದೆ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯವರ ಹತ್ತಿರವೂ ಹೋಗಿದ್ದೆ. ಜಿಲ್ಲಾಧಿಕಾರಿಗಳ ಆದೇಶವನ್ನು ನಾನು ಪರಿಷ್ಕರಣೆ ಮಾಡಲು ಆಗುವುದಿಲ್ಲ, ಅದರ ಕಾರ್ಯವ್ಯಾಪ್ತಿ ನನಗೆ ಬರುವುದಿಲ್ಲ ಎಂದು ಹೇಳಿದರು. ಯಾವುದೇ ರೀತಿ ಜಿಲ್ಲಾಧಿಕಾರಿಗಳ ಆದೇಶವನ್ನು ನಾನು ಪುನರ್‌ವಿಮರ್ಶೆ

ಮಾಡಲಾಗುವುದಿಲ್ಲ ಎಂದು ಹೇಳುವ ಹಾಗಿದ್ದರೆ ಡಿ.ಎಂ.ಎ.ಅವರ ಅವಶ್ಯಕತೆ ಏನಿದೆ? ನೀವು ಡಿ.ಎಂ.ಎ.ಗಳಿಗೆ ಟೆಕ್ನಿಕಲ್ ಹ್ಯಾಂಡನ್ನು ಕೊಟ್ಟಿದ್ದೀರಿ, ಯಾವುದೇ ಪುರಸಭೆಯವರು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್‌ಗೆ ಡಿ.ಎಂ.ಎ.ಗೆ ಕಳುಹಿಸುತ್ತಿಲ್ಲ. ಯು.ಡಿ.ಗೆ ಕಳುಹಿಸುವುದಿಲ್ಲ. ಅಲ್ಲಿನ ಯಾವುದೇ ಚೀಫ್ ಆಫೀಸರ್‌ಗಳನ್ನು ಅಥವಾ ಕಮೀಷನರ್‌ಗಳನ್ನು ಕೇಳಿದರೆ ಡಿ.ಎಂ.ಎ.ಗೆ ಬರೆಯುವ ಅಧಿಕಾರ ನನಗೆ ಇಲ್ಲ ಎಂದು ಹೇಳುತ್ತಾರೆ. ಹಾಗಿದ್ದ ಮೇಲೆ ಡಿ.ಎಂ.ಎ. ಅವಶ್ಯಕತೆ ಏನಿದೆ? ಆ ಹುದ್ದೆಗೆ ಏಕೆ ಅಷ್ಟೊಂದು ಇನ್‌ವೆಸ್ಟ್‌ಮೆಂಟ್ ಮಾಡಬೇಕು? ಇದರ ಬಗ್ಗೆ ತಾವು ಹೇಳಬೇಕು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ನಮ್ಮ ನಗರಸಭೆಗಳ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆ ಮಾಡುವ ದೃಷ್ಟಿಯಿಂದ ಇದನ್ನು ಇಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಯೋಜನೆಗಳಿಂದ ಬಂದಿರುವ ಕಾಮಗಾರಿಗಳನ್ನು ನೋಡತಕ್ಕಂಥ ಹೆಚ್ಚಿನ ಜವಾಬ್ದಾರಿ ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್‌ರವರದ್ದು ಆಗಿದೆ. ಬೇರೆ ಬೇರೆ ಇಲಾಖೆಗಳಲ್ಲೂ ನಿರ್ದೇಶನಾಲಯವಿದೆ. ಹಾರ್ಟಿಕಲ್ಚರ್ ಡೈರೆಕ್ಟರ್ ಇದ್ದಾರೆ, ಅಗ್ರಿಕಲ್ಚರ್ ಡೈರೆಕ್ಟರ್ ಇದ್ದಾರೆ. ಈ ರೀತಿ ಬೇರೆ ಎಲ್ಲ ಇಲಾಖೆಗಳಲ್ಲಿರುವಂತೆ ನಮ್ಮ ಇಲಾಖೆಯಲ್ಲಿ ಕೂಡ ಡೈರೆಕ್ಟರ್ ಆಫ್ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಇರುವುದರಿಂದ ಆಡಳಿತದ ದೃಷ್ಟಿಯಿಂದ ಅನುಕೂಲವಾಗುತ್ತದೆ. ಒಳ್ಳೆಯ ಆಡಳಿತವನ್ನು ಕೊಡಬಹುದು. ಮೊದಲು ಅಷ್ಟೊಂದು ಕೆಲಸವಿರಲಿಲ್ಲ. ಈಗ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕು ಎಂದು ಸುಮಾರು 100 ಕೋಟಿ ರೂಪಾಯಿಗಳನ್ನು ಹುಡ್ಕೋ ಮೂಲಕ ಸಾಲ ಕೊಡುತ್ತಿದ್ದೇವೆ. ಪ್ರತಿಯೊಂದು ಪುರಸಭೆ, ನಗರಸಭೆಗಳಿಗೆ ನಾವು ಕೊಡತಕ್ಕಂಥ ಹಣ ಸದ್ವಿನಿಯೋಗವಾಗಬೇಕು, ಒಳ್ಳೆಯ ಕೆಲಸಕಾರ್ಯಗಳು ನಡೆಯಬೇಕು. ಕೇಂದ್ರ ಸರ್ಕಾರದಿಂದ ಐ.ಡಿ.ಎಸ್.ಎಂ.ಟಿ. ಯೋಜನೆಗಳು ಬರುತ್ತವೆ, 10ನೇ ಹಣಕಾಸು ಆಯೋಗದಿಂದ ಸುಮಾರು 17 ಕೋಟಿ ರೂಪಾಯಿಗಳ ಯೋಜನೆಗಳು ಬರುತ್ತವೆ. ಇವೆಲ್ಲವನ್ನೂ ನೋಡತಕ್ಕಂಥಾದ್ದು ಮತ್ತು ಎಸ್.ಜಿ.ಆರ್.ವೈ. ಯೋಜನೆಯನ್ನು ಕಾರ್ಯಗತಗೊಳಿಸತಕ್ಕಂಥಾದ್ದು ನಿರ್ದೇಶಕರ ಜವಾಬ್ದಾರಿ. ಪ್ರತ್ಯೇಕವಾದಂಥ ಒಂದು ನಿರ್ದೇಶಕ ಮಂಡಳಿ ಇದ್ದರೆ, ಈ ಎಲ್ಲಾ ಯೋಜನೆಗಳಿಂದ ಹೆಚ್ಚು ಕೆಲಸಕಾರ್ಯಗಳನ್ನು ಅಪೇಕ್ಷೆ ಮಾಡಬಹುದು ಎನ್ನುವ ದೃಷ್ಟಿಯಿಂದ ಸರ್ಕಾರ ಇದನ್ನು ಮುಂದುವರಿಸಬೇಕು ಎಂದು ಇದೆ.

ಶ್ರೀ . ನಾರಾಯಣಸ್ವಾಮಿ :— ಮಾನ್ಯ ಅಧ್ಯಕ್ಷರೆ, ನಾನು 1984ರಿಂದ ಇಮತ್ತಿನವರೆಗೆ ನಗರದಲ್ಲಿಯೇ ವಾಸವಾಗಿದ್ದೇನೆ. ಹತ್ತನೆ ಹಣಕಾಸಿನ ಆಯೋಗದ ಮುಖಾಂತರ ಕೊಟ್ಟ ಹಣದಿಂದ ಅಭಿವೃದ್ಧಿ ಕಾರ್ಯಗಳು ಏನಾಗಿದೆಯೆಂದು ನೋಡುರುದಕ್ಕೆ ಯಾವುದೇ ಅಧಿಕಾರಿ ಆ ಇಲಾಖೆಯಿಂದ ಇದುವರೆಗೂ ವಿಸಿಟ್ ಮಾಡಿಲ್ಲ. ಆ ಇಲಾಖೆಯಿಂದ ಯಾವುದೇ ಅಧಿಕಾರಿ ವಿಸಿಟ್ ಮಾಡಿರುವ ದಾಖಲೆ ಇಲ್ಲ. ಹಾಗಾದರೆ ಡಿ.ಎಂ.ಎ.

ಕೆಲಸ ಏನು? ನಾನು ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ; ಅದೇನೆಂದರೆ ಡಿ.ಎಂ.ಎ ಅವರು ಪಂಚಾಯಿತಿಯಲ್ಲಿ ಕೆಲಸ ಮಾಡುವ ಬಿಲ್ ಕಲೆಕ್ಟರುಗಳಿಗೆ ಅವರು ಸೇರಿದ ಮೂರೇ ವರ್ಷದೊಳಗೆ ಅವರನ್ನು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್‌ಗಳನ್ನಾಗಿ ಮಾಡಿ ಪ್ರಮೋಷನ್ ಕೊಟ್ಟಿದ್ದಾರೆ. ಇದುವರೆಗೆ ನೂರಾರು ಜನರಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ತಮ್ಮ ಮೂಲಕ ಸಂಬಂಧಪಟ್ಟ ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಅಧ್ಯಕ್ಷರೆ, ಇಂಥದ್ದು ಸ್ಪೆಸಿಫಿಕ್ ಆಗಿ ಇರೆಗ್ಯುಲ್ಯಾರಿಟೀಸ್ ಏನಾದರೂ ಇದ್ದರೆ ಅದನ್ನು ನಾನು ತನಿಖೆ ಮಾಡಿಸುತ್ತೇನೆ.

ಮೈಸೂರಿನ ರಸ್ತೆಗಳು ದುರಸ್ಥಿ ಬಗ್ಗೆ.

554(5183) Sri A.S. Guruswamy (Chamundeshwari) :— Will the Hon'ble Minister for Urban Development be pleased to state:

a) Has it come to the notice of the Government that there are no PWD roads, Corporation roads, Jilla and Grama panchayath roads are coming under the jurisdiction of Mysore City?

b) Is there any difference in the maintenance of roads between PWD and other departments? Has it come to the notice of the Government?

c) Is there any proposal before the Government to improve and maintain these roads by a single agency?

d) What are the actions taken by the Government in this regard?

SRI B.B. Chimmana katti (Minister for Urban Development) :—

a) P.W.D. Roads and Corporation Roads are coming under the jurisdiction of Mysore City, but not the Jilla Panchayath and Grama Panchayath Roads.

b), c) No, Such instance has come to the notice of Urban Development, Thus there is no proposal.

d) Does not arise.